ಮೂಲಕ: ನಿಲುಗಡೆಯ ನಿದಾನ ಜಾರಿ ಮಡಕೆಯೊಳಕ್ಕಿಳಿದು ರಭಸ ನಿಧಾನಕ್ಕೇರುತ್ತೇರುತ್ತ, ಮಂತಿನ ವೇಗಕ್ಕೊಗ್ಗುವ ಲಯ, ಅಲ್ಲೇ ನಿಮಗ್ನ ಕಡೆವ ಕೈ, ಒಮ್ಮೆಗೆ ಜೋರಾಗಿ ಮತ್ತೆ ಇಳಿದು ನಡುನಡುವಲ್ಲಿ ನಿಂತು, ಈಗ ಎಳೆದು ಆಗಲೇ ಹಿಡಿದು ಬಿಟ್ಟು ಹಿಡಿದು... ರಭಸವು ಭಸಭಸನಿಳಿಯುತ್ತ ತೇಲುತ್ತ ಬರುವ ಬೆಣ್ಣೆಯ, ಬಗ್ಗಿ ಹಣಕಿ ಹಾಕಿ ಮಡಕೆಯೊಳಕ್ಕೆ ನೋಡುವ ಅಮ್ಮನ ಬೆಣ್ಣೆಕಣ್ಣು!

ಹೇಗೆ ಕಡೆಗೋಲು ಸರಗಂಟಿನೊಳಗೆ ಬಂಧಿಯಾಗಿದ್ದರೇನೇ ಮಂತಾಡಲು ಸಾಧ್ಯವೋ, ನಾವು ಭಾಷೆ ಜೊತೆ ಬಂಧಿಸಿಕೊಳ್ಳುವ ಬಗೆ ಮಾತ್ರವೇ ಭಾಷೆಗೆ ಸಂವಹನ (ಕಮ್ಯುನಿಕೇಟ್) ಮಾಡುವ ಕೆಲಸಕ್ಕಿಂತ ಇನ್ನೂ ಮಿಗಿಲಾದ ಅದ್ಭುತ ಕೆಲಸಗಳಿವೆ ಎಂಬ ಅರಿವನ್ನು ಮೂಡಿಸಬಲ್ಲದು. ಬಂಧನದೊಳಗೇ 'ಬಂಧ'(ಕೂಡಿಸುವುದು)ವೂ ಇದೆ. ಬರಿಯ ಬಂಧನದಿಂದ ಕೇವಲ ಸಂವಹನ ಮಾಧ್ಯಮವಾಗಿ ಕುಂದುವ ಕವಿತೆಯು ಬಂಧವೂ ಇದ್ದಾಗ ಮೊಸರಿನಿಂದ ಬೆಣ್ಣೆ ಒಡಮೂಡುವಂತೆ ಬಿಡುಗಡೆಗೊಂಡು ತೇಲುವುದೇ ಭಾಷೆಯ ಸೋಜಿಗ!

ಭೌಗೋಳಿಕ ಎಲ್ಲೆ, ನಾಡಿನ ಪರಂಪರೆಯಂತಹ ಒಳಶಕ್ತಿಗಳಿಂದಲೇ ತನ್ನನ್ನು ತಾನು ನಿರೂಪಿಸಿಕೊಳ್ಳುವ ನಮ್ಮ ರಾಷ್ಟ್ರಗೀತೆ ಮತ್ತು ನಾಡಗೀತೆಯು ಒಂದು ನಾಡಿನ, ಅಲ್ಲಿನ ಜನರ ಆತ್ಮಗೌರವದ ಪ್ರತೀಕ, ಸಂಕೇತ. ನಾನಾಡುವ ಭಾಷೆಯು ಸಂವಹನ ಮಾಧ್ಯಮವಷ್ಟೇ ಅಲ್ಲ, ಅದು ನನ್ನ ಒಳಶಕ್ತಿ ಎಂಬ ಅರಿವನ್ನು ಈ ಗೀತೆಗಳು ಮೂಡಿಸುವುದರಿಂದಲೇ ಇವು ಗಳೊಂದಿಗೆ ನನ್ನ ಭಾವನಾತ್ಮಕ ಬೆಸುಗೆ. ಹಿಂದಿನ ಪೀಳಿಗೆಯ ಹೋಲಿಕೆಯಲ್ಲಿ ನಾಡು, ನುಡಿಯ ಕುರಿತಾದ ಕವಿತೆಗಳ ಸಂಖ್ಯೆ ಈಗ ಕಡಿಮೆ ಯಾಗಿರುವುದಕ್ಕೆ ರಾಷ್ಟ್ರೀಯತೆ, ಪ್ರಾದೇಶಿಕತೆಯನ್ನು ಕುರಿತ ನಿಲುವುಗಳಲ್ಲಿ ಆಗಿರುವ ಬದಲಾವಣೆಯೂ ಸೇರಿದಂತೆ ಹಲವಾರು ಕಾರಣಗಳಿವೆ. ಆದರೆ ನಾಡು–ನುಡಿಯ ಬಗ್ಗೆ ನೇರವಾಗಿ ಬರೆಯದೆಯೂ, ಭಾಷೆಯ ಜೀವದ ಎಳೆಗಳನ್ನು ಹಿಡಿದು ಆಡುತ್ತಿರುವ (ಕೆಲವೇ ಕೆಲವು) ಕವಿತೆಗಳು ನಾಡು–ನುಡಿಯ ಉಳಿವಿನ ಹಂಬಲದಿಂದಲೇ ಹುಟ್ಟಿದಂತಹವಲ್ಲವೆ?

✿

